ಸ್ನೇಹವೇ ಅವಳನ್ನು ಶರ್ಮಿಳಾಳಿಂದ ದೂರ ಇಡುವಲ್ಲಿ ಅಡ್ಡ ಬಂದಿತ್ತು.

ಮರುದಿನ ಮಧ್ಯಾಹ್ನ ಇರ್ನ ತನ್ನ ಟಿಫಿನ್ ಬಾಕ್ಸ್ ತೆರೆದು ತಿಂಡಿ ತಿನ್ನುವ ಹೊತ್ತಲ್ಲಿ ಶರ್ಮಿಳಾ ಅವಳ ಹತ್ತಿರ ಬರತೊಡಗಿದಳು. ಅವಳು ಹಾಗೆ ಬರುತ್ತಿರುವುದನ್ನು ಗಮನಿಸಿದ ಇರ್ನ ತನ್ನ ಬಾಕ್ಸ್‌ನಲ್ಲಿದ್ದ ಗೋಮಾಂಸದ ತಿಂಡಿಯ ಕೊನೆಯ ತುಂಡನ್ನು ಒಮ್ಮೆಲೇ ಇಡಿಯಾಗಿ ಬಾಯಲ್ಲಿ ತುರುಕಿಕೊಂಡು ಅವಸರವಸರವಾಗಿ ತಿನ್ನತೊಡಗಿದಳು. ಅದನ್ನು ನೋಡಿದ ಶರ್ಮಿಳಾ–

"ಏ... ಆಸೆಬುರುಕ ಗುಡ್ಡೆ... ಹಾಗೇಕೆ ಗಬ ಗಬ ತಿನ್ನುತ್ತಿರುವಿ? ನಿಧಾನವಾಗಿ ತಿನ್ನೇ... ನೋಡಿಲ್ಲಿ; ನನ್ನ ತಾಯಿ ಏನು ಮಾಡಿದ್ದಾರೆ ಗೊತ್ತಾ?... ಕುಂಬಳಕಾಯಿಯ ಕಡಬು!!" ಎನ್ನುತ್ತಲೇ ಅದರ ಒಂದು ತುಂಡನ್ನು ಖುಷಿಯಿಂದ ಇರ್ನಯ ಬಾಕ್ಸ್‌ನಲ್ಲಿ ಇಟ್ಟಳು. ಆ ಸಿಹಿಕಡುಬನ್ನು ತಿಂದ ಇರ್ನಯ ಕಣ್ಣು ಏಕಾಏಕಿ ತುಂಬಿಬಂದವು. ಅದಕ್ಕೆ ಕಾರಣವೇನೆಂಬುದನ್ನು ಅವಳಿಗೆ ತಿಳಿಯಲಾಗಲಿಲ್ಲ.

ಮರುದಿನ ಮುಂಜಾನೆ ಶಾಲೆಯಲ್ಲಿ ಶರ್ಮಿಳಾ ಇರ್ನಯ ಹತ್ತಿರ ಓಡಿ ಬಂದವಳೇ, "ಇವತ್ತು ನಿನಗೊಂದು ಅಚ್ಚರಿ ಕೊಡುವೆ!! ಮಧ್ಯಾಹ್ನದ ಬಿಡುವಿನಲ್ಲಿ ಭೆಟ್ಟಿಯಾಗೋಣ" ಎಂದವಳೇ ತಿರುಗಿ ಹೋಗಿಬಿಟ್ಟಳು. ಏನಾದರೂ ಒಳ್ಳೆಯ ಸುದ್ದಿ ಇರಬಹುದೆಂದುಕೊಂಡ ಇರ್ನಗೆ ಬಿಡುವಿನ ಸಮಯದವರೆಗೆ ಕಾಯಲಾಗದಷ್ಟು ಕುತೂಹಲ!! ಮೊದಲನೆಯ ಪೀರಿಯಡ್ ಮುಗಿದ ಕೂಡಲೇ ಅವಳು ಶರ್ಮಿಳಾಳ ಡೆಸ್ಕ್‌ನ ಹತ್ತಿರ ಹೋಗಿ "ಹೇಳು... ಏನದು ಅಚ್ಚರಿಯ ವಿಷಯ?" ಎಂದು ಕೇಳಿದಳು.

ಶರ್ಮಿಳಾ ಒಮ್ಮೆಲೇ ತನ್ನ ಬ್ಯಾಗನ್ನು ತೆರೆದಳು. ಅದರ ಮೇಲ್ಭಾಗದಲ್ಲಿಯೇ ಪ್ರಾಣಿಗಳು ಗುಂಪುಗೂಡಿ ನಿಂತ ಒಂದು ಚಿತ್ರ ಕಾಣಿಸಿತು. ಅದನ್ನು ನೋಡಬೇಕೆನ್ನುವುದರೊಳಗೇ ಟೀಚರ್ ಒಳಗೆ ಬಂದ ಕಾರಣ ಇರ್ನ ಮತ್ತೆ ತಿರುಗಿ ತನ್ನ ಜಾಗೆಯತ್ತ ಹೋಗಿಬಿಟ್ಟಳು. 'ಶರ್ಮಿಳಾ ಕೆಲವು ದಿನಗಳಿಂದ ಯಾವುದೋ ಒಂದು ಪುಸ್ತಕದ ಬಗ್ಗೆ ಮಾತಾಡುತ್ತಲೇ ಇದ್ದಾಳೆ. ಬಹುಶಃ ಅವಳು ತೋರಿಸಿದ ಆ ಚಿತ್ರ, ಹಲವಾರು ಪ್ರಾಣಿಗಳು ಹೊಲದಲ್ಲಿ ಗುಂಪಾಗಿ ಒಂದೇ ಕಡೆ ವಾಸವಿದ್ದ ಕತೆಯ ಪುಸ್ತಕದ್ದಾಗಿರಬೇಕು. ಒಂದೇ ಕಡೆ ಇದ್ದರೂ ಮಾನವರು ಒಬ್ಬರಿಗೊಬ್ಬರು ಹೊಡೆದಾಡುವ ಹಾಗೂ ವೈರತ್ವದಿಂದ ಒಬ್ಬರು ಇನ್ನೊಬ್ಬರ ಕಾಲನ್ನು ಎಳೆಯುವ ಸ್ಥಿತಿಗೆ ವ್ಯಂಗ್ಯ ಮಾಡುತ್ತಿರುವ ಹಾಗಿರಬೇಕು ಆ ಚಿತ್ರದ ಪುಸ್ತಕ' ಹೀಗೆಂದು ಊಹಿಸಿದ ಇರ್ನಗೆ ಆ ಪುಸ್ತಕವನ್ನು ಓದಬೇಕೆಂಬ ತೀವ್ರ ಹಂಬಲ ಉಂಟಾಯಿತು.

ಊಟದ ಬಿಡುವಿನಲ್ಲಿ ಶರ್ಮಿಳಾ, ಇರ್ನಯ ಕೈಯನ್ನು ಗಟ್ಟಿಯಾಗಿ ಹಿಡಿದು ಅವಳನ್ನು ಎಳೆದುಕೊಂಡೇ ಹೊರಗೆ ಬಂದು, "ನೋಡು... ಆಶ್ಚರ್ಯವನ್ನು..." ಎಂದಳು.

"ಇದು ಪ್ರಾಣಿಗಳು ಒಂದೇ ಕಡೆ ವಾಸವಿರುವ ಹೊಲದ ಪುಸ್ತಕ... ಅಲ್ಲವೇ?'' ಎಂದಳು ಇರ್ನ.

"ಊಹೂಂ... ಖಂಡಿತ ಅಲ್ಲ. ಇದು ಬರ್ಗರ್ ಕಣೇ... ನಿಮ್ಮ ಅಮ್ಮ ಮಾಡಿದ್ದರಲ್ಲ, ಅಂಥದ್ದೇ ಬರ್ಗರ್ ಇದು!!" ಎನ್ನುತ್ತ ಬಾಕ್ಸನ್ನು ಬಿಚ್ಚಿದಳು ಶರ್ಮಿಳಾ. "ನೋಡು ನಮ್ಮ ಮನೆಯ ಹತ್ತಿರವೇ ತಿಂಡಿತಿನಿಸುಗಳ ಒಂದು ಅಂಗಡಿ ಇದೆ. ನಾನು ಕೇಳಿದೆ ಅಂತ ನನ್ನ ತಂದೆ ಮೊನ್ನೆ ಅಲ್ಲಿಗೆ ಹೋಗಿ ನನಗಾಗಿ ಒಂದು ಬರ್ಗರನ್ನು ತಂದಿದ್ದರು. ಅದನ್ನು ನೋಡಿದ ನಾನು – ಅಪ್ಪ, ನನಗೆ ಬೇಕಾಗಿರುವ ಬರ್ಗರ್ ಇದಲ್ಲ; ಇರ್ನ ನನಗೆ ಕೊಟ್ಟಿದ್ದಳಲ್ಲ ಅದು ಇದಕ್ಕಿಂತ